ಶ್ರೀ ಧರ್ಮ ಸಿಂಗ್

(ಸಮಾಜ ಕಲ್ಯಾಣ ಸಚಿವರು)

-ಇಲ್ಲ-

ಉದ್ಭವಿಸುವುದಿಲ್ಲ.

ಈ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :- ಶಿವಮೊಗ್ಗ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಕಬ್ಬು ಅರೆಯುವ ಸಾಮರ್ಥ್ಯದ ಬಗ್ಗೆ

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 153(484)

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ)

ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಹಾಗೂ ಪ್ರತಿ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯಗಳೇನು;

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಕಬ್ಬು ಉತ್ಪಾದಿಸುವ ಜಮೀನಿನ ವಿಸ್ತೀರ್ಣ ಎಷ್ಟು (ಅಂದಾಜು) ಹಾಗೂ ಉತ್ಪಾದಿಸಬಹುದಾದ ಸಾಮರ್ಥ್ಯ ಎಷ್ಟು (ತೂಕದಲ್ಲಿ);

ಇ) ಕಾರ್ಖಾನೆಗಳು ಅರೆಯದೇ ಉಳಿಯಬಹುದಾದ ಕಬ್ಬಿನ ತೂಕ ಎಷ್ಟು? ಈ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಡಾ : ಹೆಗ್ಗಪ್ಪ ಡಿ.ಲಮಾಣಿ

(ಸಕ್ಕರೆ ಸಚಿವರು)

ಶಿವಮೊಗ್ಗ ಜಿಲ್ಲೆಯಲ್ಲಿ 2 ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾಗಿದ್ದು ಇವುಗಳ ಕಬ್ಬು ಅರೆಯುವ ಸಾಮರ್ಥ್ಯ ಕೆಳಕಂಡಂತೆ ಇರುತ್ತೆದೆ:

(1) ಎಂ.ಪಿ.ಎಂ. ಷುಗರ್ಸ್ ಲಿ., ಭದ್ರಾವತಿ-ದಿನಂಪ್ರತಿ 2500 ಮೆ.ಟನ್

(2) ತುಂಗಭದ್ರಾ ಷುಗರ್ ವರ್ಕ್ಸ್ ಲಿ., ಶಿವಮೊಗ್ಗ -ದಿನಂಪ್ರತಿ 2500 ಮೆ.ಟನ್

1993-94ಅಂಕಿ ಅಂಶ ಆಧಾರಿತ:

ಕಬ್ಬು ಉತ್ಪಾದಿಸುವ ಜಮೀನಿನ ವಿಸ್ತೀರ್ಣ (ಅಂದಾಜು) - 12130 ಹೆಕ್ಟೇರ್‌ಗಳು

ಒಟ್ಟು ಕಬ್ಬಿನ ಉತ್ಪನ್ನ(ಅಂದಾಜು) - 1394950 ಟನ್

ಕಾರ್ಖಾನೆಗಳು ಅರೆಯದೇ ಉಳಿಯಬಹುದಾದ ಕಬ್ಬಿನ ಪ್ರಮಾಣ ಸುಮಾರು 5.94 ಲಕ್ಷ ಮೆ.ಟನ್‌ಗಳಾಗಿರುತ್ತವೆ. ಸದ್ಯಕ್ಕೆ ಈ ಕಬ್ಬಿನ ಪ್ರಮಾಣದಲ್ಲಿ ಸ್ವಲ್ಪ ಪ್ರಮಾಣವು ದಾವಣಗೆರೆ ಸಕ್ಕರೆ ಕಾರ್ಖಾನೆ ಹಾಗೂ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ, ಬ್ರಹ್ಮಾವರಕ್ಕೆ ಹಾಗೂ ಉಳಿಕೆ ಕಬ್ಬು ಬೆಲ್ಲ ತಯಾರಿಕೆ, ಖಂಡಸಾರಿ ಘಟಕ, ಬಿತ್ತನೆಬೀಜ ಹಾಗೂ ಇತರೆ ಉಪಯೋಗಕ್ಕಾಗಿ ಹೋಗುತ್ತಿರುತ್ತದೆ. ಈ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನಲ್ಲಿ ಖಾಸಗಿ ವಲಯದಲ್ಲಿ 2500 ಮೆ.ಟನ್ ಸಾಮರ್ಥ್ಯ ಉಳ್ಳ ಸಕ್ಕರೆ ಕಾರ್ಖಾನೆ ಸ್ಥಾಪಿಸುವ ಬಗ್ಗೆ ಬಂದಿದ್ದ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರವು

ಭಾರತ ಸರ್ಕಾರಕ್ಕೆ ಅನುಮತಿ ಪತ್ರ ನೀಡುವಿಕೆಗಾಗಿ ಶಿಫಾರಸ್ಸು ಮಾಡಿದೆ. ಇದರ ಜೊತೆಗೆ ಎಂ.ಪಿ.ಎಂ. ಸಕ್ಕರೆ ಕಾರ್ಖಾನೆಯು ಹಾಲಿ ಇರುವ ತನ್ನ ಸಾಮರ್ಥ್ಯವನ್ನು ದಿನವಹಿ 2500 ಟಿಸಿಡಿಯಿಂದ 3500 ಟಿಸಿಡಿಗೆ ಹೆಚ್ಚಿಸಲು ಉದ್ದೇಶಿಸಿದೆ. ರಾಜ್ಯ ಸರ್ಕಾರವು ಕಾರ್ಖಾನೆಯ ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಅನುಮತಿಪತ್ರ ನೀಡಿಕೆಗಾಗಿ ಶಿಪಾರಸ್ಸು ಮಾಡಿದೆ. ರಾಜ್ಯ ಸರ್ಕಾರವು ಮೇಲ್ಕಂಡ ಜಿಲ್ಲೆಯ ಹೆಚ್ಚುವರಿ ಕಬ್ಬಿನ ಪರಿಸ್ಥಿತಿಯನ್ನು ನಿವಾರಿಸಲು ಈಗಾಗಲೇ ಕ್ರಮ ಕೈಗೊಂಡಿದೆ.

ವಿಷಯ : – ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಸುತಗಟ್ಟಿ ಗ್ರಾಮದಲ್ಲಿ ಫ್ರೀ ಮ್ಯಾಟ್ರಿಕ್ಯುಲೇಟ್ ಬಿ.ಸಿ.ಎಂ. ಹಾಸ್ಟೆಲ್ ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 154(377)

ಶ್ರೀ ಶಿವಾನಂದ ಹೆಚ್. ಕೌಜಲಗಿ(ಬೈಲಹೊಂಗಲ)

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕ ಪೈಕಿ ಸುತಗಟ್ಟಿ ಗ್ರಾಮದಲ್ಲಿ ಫ್ರೀ ಮ್ಯಾಟ್ರಿಕ್ಯುಲೇಟ್ ಬಿ.ಸಿ.ಎಂ. ಹಾಸ್ಟೇಲ್ ಪ್ರಾರಂಭಿಸಲು ಮಾನ್ಯ ಮುಖ್ಯ ಮಂತ್ರಿಗಳು ಕಾರ್ಯದರ್ಶಿಗಳಿಗೆ ಆದೇಶ ನೀಡಿದ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಗ್ರಾಮದಲ್ಲಿ ಬಿ.ಸಿ.ಎಂ. ಹಾಸ್ಟೆಲ್ ಪ್ರಾರಂಭಿಸಲು ಸರ್ಕಾರದವರು ಯಾವ ಕ್ರಮಕೈಗೊಂಡಿರುವರು ಮತ್ತು ಇನ್ನು ಎಷ್ಟು ದಿನಗಳಲ್ಲಿ ಈ ಹಾಸ್ಟೇಲ್ ಪ್ರಾರಂಭಿಸಲಾಗುವುದು;

ಇ) ಅಲ್ಲಿ ಬಿ.ಸಿ.ಎಂ. ಹಾಸ್ಟೇಲ್ ಇಲ್ಲದೆ ಇರುವುದರಿಂದ ಅಲ್ಲಿಯ ಹಾಯಸ್ಕೂಲ ಹಾಗೂ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಧರ್ಮಸಿಂಗ್
(ಸಮಾಜ ಕಲ್ಯಾಣ ಸಚಿವರು)

ಹೌದು.

1993-94ನೇ ಸಾಲಿಗೆ ಒಟ್ಟು 100 ಮೆಟ್ರಿಕ್ ಪೂರ್ವ : ಮೆಟ್ರಿಕ್ ನಂತರದ ಬಾಲಕ : ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಸರ್ಕಾರವು ಪ್ರಾರಂಭಿಸಲು ಉದ್ದೇಶಿಸಿದ್ದು ಪ್ರಸಕ್ತ ಸಾಲಿನ ಪ್ರಸ್ತಾವನೆಯಲ್ಲಿ ಸದರಿ ಸ್ಥಳವನ್ನು ಸೇರಿಸಲಾಗಿದೆ. ಆದಷ್ಟು ಜಾಗ್ರತೆ ಹಾಸ್ಟೇಲ್‌ನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಬಂದಿದೆ.

ವಿಷಯ : – ವಿಧಾನ ಸಭೆಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನೇಸರ್ಗಿ ಗ್ರಾಮದಲ್ಲಿ ಸರ್ಕಾರಿ ಐ.ಟಿ.ಐ ಪ್ರಾರಂಭಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 156(380)

ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ)

ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ;